ಶ್ರೀ ಜಿ. ಎಸ್. ಯುಡಿಯೂರಪ್ಪ : ಏನಿಲ್ಲ ಸಾರ್, ಇದು ಕರೆಯುವ ಎಮ್ಮೆಯಾಗಿರುವುದರಿಂದ, ಹಾಲು ಕರೆಯುವ ಪ್ರಯತ್ನ ಮಾಡುತ್ತಿದ್ದಾರೆ ಗೊಡ್ಡು ಎಮ್ಮೆಯಾಗಿದ್ದರೆ. ಕೇಳುತ್ತಿರಲಿಲ್ಲ.

ಅಧ್ಯಕ್ಷರು : ಅಶೋಕ, ನೀವು ಮೂರೂ ಜನರು ಏನು ಬೇಡಿಕೆಯನ್ನು ತಿಳಿಸಿದ್ದೀರಿ, ಅದನ್ನು ಅವರು ಗಮನದಲ್ಲಿಟ್ಟು ಕೊಂಡು ಈ ಸಲ ಅವರು ಇಲಾಖೆ ಇದನ್ನೆಲ್ಲಾ ಅಲಾಟ್‌ಮೇಂಟ್ ಮಾಡುವಾಗ ಇದಕ್ಕೆ ಖಂಡಿತವಾಗಿ ಪೈಯಾರಿಟಿ ಕೊಡುತ್ತಾರೆ.

***ವಿಷಯ : ಸೋಮವಾರ ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವ.***

221 (1864)-ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಸೋಮವಾರ ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆಬಂದಿದೆಯೇ ?

2) ಬಂದಿದ್ದಲ್ಲಿ ಸರ್ಕಾರದಿಂದ ಯಾವ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

1) ಇಲ್ಲ.

2) ಉದ್ಭವಿಸುವುದಿಲ್ಲ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಸನ್ಮಾನ್ಯ ಅಧ್ಯಕ್ಷರೆ ನಮ್ಮ ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೇ ಅವರು "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಬಂದಿದ್ದರೆ, ಅದಕ್ಕೆ ಅವರು ಉದ್ಭವಿಸುವುದಿಲ್ಲವೆಂದು ಉತ್ತರಿಸಿದ್ದಾರೆ. ನಾನು ಕಳೆದ ಬಜೆಟ್ ಭಾಷಣದಲ್ಲೂ ಕೂಡ ನನ್ನ ಸೋಮವಾರ ಪೇಟೆ ತಾಲ್ಲೂಕಿನ ಸಾಧಾರಣ, ಹಾಸನ ಮತ್ತು ಮೈಸೂರಿಗೇ ಸೇರಿದ ರೀತಿಯಲ್ಲಿ ಸ್ವಲ್ಪ ಒಣ ಪ್ರದೇಶವೆಂದು ಹೇಳಿದರೂ ಕೂಡ ತಪ್ಪಾಗಲಾರದು. ಇದನ್ನು ಬಜೆಟ್ ಭಾಷಣದಲ್ಲಿ ಕೂಡ ಹೇಳಿದ್ದೇನೆ. ಕುಡಿಯುವ ನೀರಿನ ಅಭಾವ ನಮ್ಮ ತಾಲ್ಲೂಕಿನಲ್ಲ ಬೇಕಾದಷ್ಟಿದೆ, ಇದನ್ನು ತಾವು

ನೀಗಿಸಬೇಕೆಂದು ಕೇಳಿದ್ದೆ. ಆಗಲೂ ಕೂಡ ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆದಾದ ನಂತರ, ಸನ್ಮಾನ್ಯ ಮಂತ್ರಿಗಳಿಗೆ ಒಂದು ಪತ್ರ ಬರೆದು ಇಲ್ಲಿ ಕುಡಿಯುವ ನೀರಿನ ಅಭಾವವಿದೆ, ಇದಕ್ಕೆ ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡೆ. ಅದನ್ನು ತಮ್ಮ ಜಿಲ್ಲಾ ಪರಿಷತ್ತಿಗೆ ಕಳುಹಿಸಲಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಅಲ್ಲಿ ಕುಡಿಯುವ ನೀರಿನ ಅಭಾವವಿದೆ ಎಂದರೆ, ಅಲ್ಲಿ ಏನೂ ಲಭ್ಯತೆಯಿಲ್ಲವೆಂದರ್ಥವಲ್ಲ. ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿ ಒಂದು 50 ಸಾವಿರ ಲೀಟರ್ ಸಾಮರ್ಥ್ಯವಿರುವ ಮೇಲುತೊಟ್ಟಿಯ ವ್ಯವಸ್ಥೆಯಿದೆ. 10 ಕೈ ಪಂಪುಗಳು ಕೆಲಸ ಮಾಡುತ್ತಿವೆ. ಆದರೆ, ಸರಾಸರಿ ತಲಾ ಅವರಿಗೆ ಕೇವಲ ಒಂದು 25 ಲೀಟರ್‌ಗಳಷ್ಟು ಎಲ್.ಟಿ.ಸಿ.ಡಿ. ಲಭ್ಯತೆಯಿರುವುದರಿಂದ, ಅದರ ಮಟ್ಟವನ್ನು ಕನಿಷ್ಠ ಪಕ್ಷ 40 ಅಥವಾ 55 ಲೀಟರ್‌ಗೆ ಏರಿಸಬೇಕೆನ್ನುವ ಕಾರಣವಿರುವುದರಿಂದ, ಅಲ್ಲಿ ಕೊರತೆ ಎನ್ನುವುದು ಕಾಣುತ್ತಿದೆ. ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸಿ ಸರಿಪಡಿಸಬೇಕು. ಎಂದು ಕ್ರಮ ಕೈಗೊಂಡಿದ್ದೇವೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಈ ವರ್ಷದ ಆಯವ್ಯಯದಲ್ಲಿ ಈ ಶುಂಠಿಕೊಪ್ಪ ಮತ್ತು ಶನಿವಾರ ಸಂತೆ ಎರಡನ್ನೂ ಸೇರಿಸಲಾಗಿದೆಯೇ ಅಥವಾ ಶನಿವಾರ ಸಂತೆಯನ್ನು ಮಾತ್ರ ಸೇರಿಸಲಾಗಿದೆಯೇ ?

ಅಧ್ಯಕ್ಷರು : ನೀವು ಕೇಳಿರುವಂತಹ ಪ್ರಶ್ನೆ ಸಂತೆಗೆ ಸಂಬಂಧಿಸಿದ್ದುದು. ಶನಿವಾರ ಸಂತೆಯನ್ನು ಮಾಡಿಸುತ್ತಾರೆ. ನ್ಯಾಯವಾಗಿ, ಶನಿವಾರ ಸಂತೆಯಲ್ಲಿ ಕೂಡ ಪ್ಲಾಂಟರ್‌ಗಳು, ಶ್ರೀಮತರಿದ್ದಾರೆ. ಅವರೆಲ್ಲಾ ಸ್ವಂತವಾಗಿ ಮಾಡಿಕೊಳ್ಳಬಹುದಿತ್ತು.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಶುಂಠಿಕೊಪ್ಪದ ಬಗ್ಗೆ ಕೂಡ ಪ್ರಶ್ನೆ ಕಳುಹಿಸಿದ್ದೇನೆ. ಅದಕ್ಕೆ ಲಿಖಿತ ಮೂಲಕ ಉತ್ತರ ಬಂದು ಬಿಟ್ಟಿದೆ. ಇದು ಸ್ಟಾರ್ಪ್ ಆಗಿ ಬಂದಿದೆ.

ಶ್ರೀ ಎಂ. ಪಿ. ಪ್ರಕಾಶ : ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಆ ಕ್ರಿಯಾ ಯೋಜನೆಯನ್ನು ರೂಪಣೆ ಮಾಡತಕ್ಕದ್ದು ಜಿಲ್ಲಾ ಪಂಚಾಯತ ಆದ್ದರಿಂದ, ಶನಿವಾರ ಸಂತೆಗೆ ಸಂಬಂಧಿಸಿದ್ದನ್ನು ನಾವು ಈಗಾಗಲೇ ಅವರಿಗೆ ತಿಳಿಸಿದ್ದೇವೆ. ತಾವು, ಇನ್ನೂ ಯಾವುದಾದರೂ ಎರಡು ಗ್ರಾಮಗಳ ಬಗ್ಗೆ ಪ್ರಸ್ತಾಪ ಮಾಡುವುದಿದ್ದರೆ, ದಯವಿಟ್ಟು ಅದನ್ನು ತಿಳಿಸಿದರೆ, ಅದನ್ನು ನಮ್ಮ ಅಧಿಕಾರಿಗಳು ಜಿಲ್ಲಾ ಪಂಚಾಯಿತಿಗೆ ಕ್ರಿಯಾ ಯೋಜನೆಯಲ್ಲಿ ದೃಢ ಸೂಚನೆಯನ್ನು ಕಳುಹಿಸಿ ಕೊಡುತ್ತಾರೆ.

ಅಧ್ಯಕ್ಷರು : ಪ್ರಶ್ನೆ ಸಂ:1765ಕ್ಕೆ ಉತ್ತರ ಅವರಿಗೂ ಬಂದಿಲ್ಲ. ನನಗೂ ಬಂದಿಲ್ಲ ಎಂದು ಟೈಂ ಕೇಳಿದ್ದೀರಾ? ಸಾಮಾನ್ಯವಾಗಿ ಅವರು ಇಲಾಖೆಯವರು ಹಾಗೆ ಮಾಡುವುದಿಲ್ಲ. ಒಳ್ಳೆಯ ಕೆಲಸ ಮಾಡುವವರಿಗೆ ನಾವು ಒಳ್ಳೆಯ ಮಾತನ್ನು ಆಡಬೇಕಾಗುತ್ತದೆ. ಸ್ವಲ್ಪ ಹೊತ್ತು ಬಿಟ್ಟು ನಂತರ ಇದನ್ನು ತೆಗೆದುಕೊಳ್ಳೋಣ.

***ವಿಷಯ : ವಯಸ್ಕರ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳು.***

ಪ್ರಶ್ನೆ ಸಂಖ್ಯೆ 223 (1794)-ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ವಯಸ್ಕರ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳೇನು

2) ವಯಸ್ಕರ ಶಿಕ್ಷಣ ಇಲಾಖೆ ಪ್ರತಿ ವರ್ಷ ಮಾಡುತ್ತಿರುವ ಖರ್ಚು ಎಷ್ಟು?

3) ಕಾರ್ಯಕ್ರಮಗಳಿ ಪ್ರಗತಿ ಸರ್ಕಾರಕ್ಕೆ ತೃಪ್ತಿ ತಂದಿದೆಯೇ?

4) ವಯಸ್ಕರ ಶಿಕ್ಷಣ ಇಲಾಖೆಯ ಅವಶ್ಯಕತೆ ಈಗ ಪ್ರಸ್ತುತವೇ?

ಶ್ರೀ ಆರ್. ಕೃಷ್ಣಪ್ಪ (ಗ್ರಂಥಾಲಯ ಮತ್ತು ವಯಸ್ಕರ ಶಿಕ್ಷಣ ರಾಜ್ಯ ಸಚಿವರು).

ಕಾರ್ಯಕ್ರಮಗಳು :

1) ಸಂಪೂರ್ಣ ಸಾಕ್ಷರತಾ ಆಂದೋಲನ ಕಾರ್ಯಕ್ರಮ.

2) ಸಾಕ್ಷರೋತ್ತರ ಆಂದೋಲನ ಕಾರ್ಯಕ್ರಮ.

3) ಜನ ಶಿಕ್ಷಣ ನಿಲಯಗಳು ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ಮುಂದುವರೆಸುವುದು (ಕೇಂದ್ರ ಯೋಜನೆ)

4) ಜನ ಶಿಕ್ಷಣ ನಿಲಯಗಳು ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ಮುಂದುವರೆಸುವುದು. (ರಾಜ್ಯ ಯೋಜನೆ)

2) ಪ್ರತಿ ವರ್ಷದ ವೆಚ್ಚ : ರೂ : 785.00 ಲಕ್ಷಗಳು,

3) ಹೌದು

4) ಹೌದು